OS 234/2015 PW-3

ದಿನಾಂಕಃ **25-11-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಂ ವಕೀಲರಿಂದಃ</u>

ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ಲಕ್ಷ್ಮೀನಾರಾಯಣಪ್ಪ ಚೌಡಪ್ಪನವರ ವಿರುದ್ದ ಹೂಡಿರುತ್ತಾರೆ. ದಾವಾ ಸ್ವತ್ತಿನ ಸರ್ವೇ ನಂ.150/ಪಿ 7. ಸದರಿ ಸ್ವತ್ತಿನ ಪೂಃ ಪುಟ್ಟಮ್ಮ ಕೋಂ ತಿಮ್ಮಯ್ಯ , ಪಃ ಬಿ.ಎಸ್.ಹನುಮಂತಯ್ಯ , ಉಃ ರಾಮಯ್ಯ ಬಿನ್ ರಾಮಕೃಷ್ಣಪ್ಪ , ದಃ ಬಡನಾಗಪ್ಪ ರವರ ಜಮೀನು ಇರುತ್ತದೆ. ದಾವಾ ಸ್ವತ್ತು ವಾದಿಗೆ ಸೇರಿರುತ್ತದೆ ಎಂಬುದಕ್ಕೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ , ಆದರೆ ಜಮೀನು ನೋಡಿರುತ್ತೇನೆ. ದಾವಾ ಸ್ವತ್ತನ್ನು ವಾದಿಯ ತಂದೆ ಯಾವ ದಿನಾಂಕದಂದು ಖರೀದಿ ಮಾಡಿರುತ್ತಾರೆ ಎಂದು ಹೇಳಲಾಗುವುದಿಲ್ಲ. ದಾವಾ ಸ್ವತ್ತು ಬಿ.ಎಸ್. ಹನುಮಂತಯ್ಯ ನವರ ಹೆಸರಿಗೆ ಇರುವಂತಹ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತನ್ನು ಹನುಮಂತಯ್ಯ ತಿಮ್ಮಯ್ಯನವರಿಂದ ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರ್ವವನ್ನು ನಾನು ನೋಡಿರುವುದಿಲ್ಲ . ಹನುಮಂತಯ್ಯ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನಿಮಗೆ ಹೇಗೆ ಗೊತ್ತಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನಾನು ದೇವಸ್ಥಾನಕ್ಕೆ ಅದೇ ದಾರಿಯಲ್ಲಿ ಹೋಗುತ್ತೇನೆ ಅದರಿಂದ ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಕೆ.ರಾಮಯ್ಯ ಸುಮಾರು 15-20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಆದರೆ ನಿಖರವಾದ ದಿನಾಂಕ ಹೇಳಲಾಗುವುದಿಲ್ಲ. 2015 ರಿಂದ ದಾವಾ ಸ್ವತ್ತಿನಲ್ಲಿ ವಾದಿ ಕಡಲೇಬೀಜ ಹಾಕುತ್ತಿದ್ದರು. ಈ ದಾವೆಯನ್ನು ಹಾಕುವ ಸಮಯದಲ್ಲಿ ವಾದಿ ದಾವಾ ಸ್ವತ್ತಿನ

ಸ್ವಾಧೀನದಲ್ಲಿರಲಿಲ್ಲ ಮತ್ತು ಯಾವುದೇಬೆಳೆ ಹಾಕಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ . ದಾವಾ ಸ್ವತ್ತು ಇಂದಿಗೂ ವಾದಿಯ ಸ್ವಾಧೀನದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ವಾದಿಯ ಮಗ ದೇವರಾಜು ಮತ್ತು ನಾನು ತುಂಬೂ ವಿಶ್ವಾಸ್ವಸ್ಥರಾಗಿರುವುದರಿಂದ ಅವರ ಹೇಳಿಕೆಯ ಮೇರೆಗೆ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ,

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ